ಮದುವೆಯಾಗುವುದು ಬೇಡವಾಗಿತ್ತು. ಆದರೆ ಅಪ್ಪ ಮಕ್ಕಳ ಅಭಿಪ್ರಾಯವನ್ನು ಕೇರ್ ಮಾಡಲಿಲ್ಲ. ಆದರೆ ಇಬ್ಬರನ್ನೂ ಯಾವುದೇ ಕುಂದುಕೊರತೆಗಳಿಲ್ಲದೆ ಓದಿಸಿದ್ದರು. ಅಮ್ಮನೊಂದಿಗೆ ಅವರಿಬ್ಬರೂ ಎಂದು ಮಾತನಾಡಲೇ ಇಲ್ಲ. ಇಬ್ಬರೂ ಐಪಿಎಸ್ ಮಾಡಿದರು. ನನಗೆ ಅದ್ಯಾಕೋ ಐಎಎಸ್ ಮತ್ತು ಐಪಿಎಸ್ ಗುಲಾಮಗಿರಿ ಕೆಲಸಗಳೆಂದು ತೋರಿದ್ದವು. ಆದರೆ ಅವು ರಾಜಕೀಯ ಮತ್ತು ಬ್ಯುರೋಕ್ರಸಿಯ ಮಧ್ಯದ ಪವರ್ ಸೆಂಟರ್‌ಗಳೆಂದು ನನಗೆ ಈಗೀಗ ಅನುಭವಕ್ಕೆ ಬರುತ್ತಿದೆ. ಆದರೂ ಆ ಪರಿಧಿಯಲ್ಲಿ ಯಾವೊತ್ತೂ ಪ್ರಾಮಾಣಿಕವಾಗಿ ಮತ್ತು ನೆಮ್ಮದಿಯಾಗಿ ಇರಲಾಗುವುದಿಲ್ಲವೆಂಬುದು ಮಾತ್ರ ಸತ್ಯ. ಅಣ್ಣಂದಿರಿಬ್ಬರಿಗೂ ನನ್ನ ಕಂಡರೆ ಬೇಸರವೇನೂ ಇಲ್ಲ. ನಾನು ಹೇಳಿದ ಎಲ್ಲಾ ಕೆಲಸಗಳನ್ನು ಮುತುವರ್ಜಿಯಿಂದಲೇ ಮಾಡುತ್ತಾರೆ. ಆದರೆ ಇಬ್ಬರದೂ ತುಂಬಾ ರಿಸರ್ವ್ ಕ್ಯಾರೆಕ್ಟರ್. ಸಿಬಿಐನಲ್ಲಿರುವ ಅಣ್ಣ ವಿಕ್ರಮ್ ರೆಡ್ಡಿ ಡೈವರ್ಸಿ. ಇನ್ನೊಬ್ಬ ಅಣ್ಣ ಮಹಿಪಾಲ್ ರೆಡ್ಡಿ ದಿಲ್ಲಿಯ ಸಿಬಿಐನಲ್ಲಿದ್ದವರು ಈಗ ತಮಿಳುನಾಡಿನಲ್ಲಿದ್ದಾರೆ. ಅವರು ತಮ್ಮ ಬ್ಯಾಚ್‌ಮೇಟ್‌ನ ಮದುವೆಯಾದರು. ಒಂದು ವಾರವೂ ದಂಪತಿಗಳು ಒಟ್ಟಾಗಿ ಇರಲೇ ಇಲ್ಲ. ಹಾಗಾಗಿ ಇಬ್ಬರೂ **extra marital relationship** ಇಟ್ಕೊಂಡಿದಾರೆ. ತಿಂಗಳಿಗೋ ಎರಡು ತಿಂಗಳಿಗೋ ಒಮ್ಮೆ ಭೇಟಿಯಾಗ್ತಾರೆ. ಒಬ್ಬಳೇ ಮಗಳು ಅಮೆರಿಕಾದಲ್ಲಿ ಎಂ.ಎಸ್. ಮಾಡ್ತಿದಾಳೆ. ಇಬ್ಬರೂ ಅರ್ಧರ್ಧ ಖರ್ಚು ನೋಡ್ಕೊತಾರೆ. ಅಂದಹಾಗೆ ಇಬ್ಬರು ಅಣ್ಣಂದಿರಾದ ವಿಕ್ರಮ್ ರೆಡ್ಡಿ ಮತ್ತು ಮಹಿಪಾಲ್ ರೆಡ್ಡಿ ಅವಳಿ ಜವಳಿಗಳು. ವಿಕ್ರಮ್ ರೆಡ್ಡಿ ಅಣ್ಣ ಮಹಿಪಾಲ್ ರೆಡ್ಡಿ ಅಣ್ಣನಿಗಿಂತ ಹತ್ತು ನಿಮಿಷ ದೊಡ್ಡವನು. ನಮ್ಮ ಕುಟುಂಬಕ್ಕೆ ಅಖಂಡವಾದ ಸರ್ಪದೋಷ ಇರುವುದಾಗಿ ಅಪ್ಪ ಹೇಳುತ್ತಿದ್ದ. ವರ್ಷಕ್ಕೊಮ್ಮೆ ಅಪ್ಪ ತಪ್ಪದೆ ಕುಕ್ಕೆ ಸುಬ್ರಹ್ಮಣ್ಯ, ಗೋಕರ್ಣ ಮತ್ತು ಕಾಳಹಸ್ತಿ ದೇವಸ್ಥಾನಗಳಿಗೆ ಭೇಟಿ ನೀಡಿ ಸರ್ಪ ಸಂಸ್ಕಾರವನ್ನು ಮಾಡಿಸುತ್ತಿದ್ದ. ಅಪ್ಪನ ಜೊತೆ ನಾನೂ ಅನೇಕ ಸಾರಿ ಆ ದೇವಸ್ಥಾನಗಳಿಗೆ ಭೇಟಿ ನೀಡಿದ ನೆನಪಿದೆ. ಇಂದಿಗೂ ವರ್ಷಕ್ಕೊಮ್ಮೆ ಇಬ್ಬರು ಅಣ್ಣಂದಿರಿಗೂ ಒಂದೇ ಸಮಯದಲ್ಲಿ ಒಂದೆರಡು ತಿಂಗಳ ಕಾಲ ಇಡೀ ಶರೀರದಲ್ಲಿ ಸರ್ಪಸುತ್ತು ಕಾಯಿಲೆ ಕಾಣಿಸಿಕೊಂಡು ಇನ್ನಿಲ್ಲದಷ್ಟು ಬಾಧೆ ಅನುಭವಿಸುತ್ತಾರೆ. ಎಂತೆಂಥಾ ಆಸ್ಪತ್ರೆಗಳಲ್ಲಿ ತೋರಿಸಿದರೂ ಪ್ರಯೋಜನವಾಗಿಲ್ಲ. ಇಬ್ಬರಲ್ಲೂ ಇದರಿಂದಾಗಿ ವಿಪರೀತ **inferiority complex** ತುಂಬಿಕೊಂಡಿದೆ. ನನಗೆ ಮಾತ್ರ ಅಂಥ ಯಾವ ಕಾಯಿಲೆಯೂ ಇಲ್ಲ. ನನ್ನಲ್ಲಿ ಅಂಥ ಯಾವ ನ್ಯೂನತೆಗಳು ಇಲ್ಲದಿದ್ದರೂ ನನ್ನ ಹೆಂಡತಿ ಆಶಾ ಬೆಂಗತಮಲೆ ನನ್ನೊಂದಿಗೆ ಬದುಕಲು ಅಸಹ್ಯಪಡುತ್ತಿರುವುದು ಏಕೆಂಬುದು ನನಗಿನ್ನೂ ಅರ್ಥವಾಗದ ಅಚ್ಚರಿಯ ಸಂಗತಿಯಾಗಿ ಉಳಿದಿದೆ'. ನನ್ನ ಮಾತುಗಳನ್ನು ಕೇಳಿ ರಾಘವರೆಡ್ಡಿ ಮಾತಿಲ್ಲದವನಾಗಿದ್ದ.

ರೂಮು ಸೇರಿ ಅರ್ಧ ಗಂಟೆ ರೆಸ್ಟ್ ತೆಗೆದುಕೊಂಡಿದ್ದೆ. ಹಾಸಿಗೆಯಿಂದ ಎದ್ದು ಮುಖ ತೊಳೆದವನಿಗೆ ಕಾಫಿ ಕುಡಿಯಬೇಕೆನಿಸಿ ರಾಘವ ರೆಡ್ಡಿ ರೂಮಿಗೆ ಹೋಗೋಣವೆಂದು ಬಟ್ಟೆ ತೊಟ್ಟು ರೆಡಿಯಾಗಿದ್ದೆ. ಬೆಳಿಗ್ಗೆ ಒಂದು ಕಾರು ಮಾಡಿಕೊಂಡು ಮಸ್ಸೂರಿಗೆ ಹೋಗಿಬಿಡೋಣವೆ ಎಂದು ಯೋಚಿಸುತ್ತಿರುವಾಗಲೇ ರೂಮಿನ ಕಾಲಿಂಗ್ ಬೆಲ್ ಸದ್ದಾಗಿ ಬಾಗಿಲು ತೆರೆದಿದ್ದೆ. ರಾಘವರೆಡ್ಡಿ ನಿಂತಿದ್ದ. 'ಏನು, ಎಲ್ಲೋ ಹೋಗಲು ರೆಡಿಯಾದಂಗಿದೆ' ಎಂದವನಿಗೆ 'ನಿಮ್ಮ ರೂಮಿಗೆ ಬರೋಣವೆಂದು ಹೊರಟಿದ್ದೆ, ನಿಮ್ಮ ಜೊತೇಲಿ ಕಾಫಿ ಕುಡಿಯೋಣ ಅಂತ' ಎಂದಿದ್ದೆ. 'ಓಹ್ ಬ್ರದರ್ ಆಗಲೇ ಕತ್ತಲಾಗ್ತ ಇದೆ, ಈಗೆಂತ ಕಾಫಿ. ಸಫ್ದಾರ್ಜಂಗ್‌ನಲ್ಲಿ ನಮ್ಮ ಅಣ್ಣ ಸತ್ಯನಾರಾಯಣುಡುವಿನ ಸ್ನೇಹಿತ ಇದಾನೆ. ಕಾರಿನಲ್ಲಿ ಹದಿನೈದು ನಿಮಿಷದ ದಾರಿ. ನನಗೂ ತುಂಬಾನೇ ಕ್ಲೋಸ್. ನಮ್ಮ ಜಿಲ್ಲೆಯವನೆ, ಕೆಮಿಕಲ್ ವ್ಯಾಪಾರಿ. ಜೊತೆಗೆ ದೊಡ್ಡ ಬಜೆಟ್ ಸಿನಿಮಾಗಳ ಪ್ರೊಡ್ಯೂಸರ್. ನೂರಾರು ಕೋಟಿಗಳಿಗಿದಾನೆ, ಚಮ್ಮಡಾಲ ಅಜೀಮ್ ಖಾನ್ ಅಂತ. ಇವರ ತಾತ ಸೈಕಲ್ ಮೇಲೆ ಊರೂರು ಅಲೆಯುತ್ತಾ ಕುರಿ, ಮೇಕೆ ಚರ್ಮಗಳನ್ನು ಖರೀದಿಸಿ, ಅವನ್ನು ಹದ ಮಾಡಿ ಪಟ್ಟಣಕ್ಕೆ ಕೊಂಡೋಗಿ ಒಳ್ಳೆಯ ಬೆಲೆಗೆ ಮಾರುತ್ತಿದ್ದನಂತೆ. ಇವೊತ್ತು ಎಷ್ಟೇ ಕೋಟಿಗಳಿಗಿದ್ದರೂ ಮೂಲ ವೃತ್ತಿಯನ್ನು ವಂಶದ ಎಲ್ಲಾ ವ್ಯಕ್ತಿಗಳ ಹೆಸರಿನ ಮುಂದೆಯೂ ಸೇರಿಸಿಕೊಂಡಿದ್ದಾರೆ. ಮತ್ತು ಹಿಂದಿನದನ್ನು ಮರೆತಿಲ್ಲ. ಯಾವೊತ್ತೂ ಬೇರುಗಳನ್ನು ಕಡೆಗಣಿಸಬಾರದು. ಬೇರುಗಳನ್ನು ಅಲಕ್ಷಿಸಿದ ಕೊಂಬೆಗಳು ಬಹಳ ದಿನ ಬಾಳುವುದಿಲ್ಲ. ನಮ್ಮ ತಾತ ಈ ಅಜೀಮ್ ಖಾನರ ತಾತನಿಗೆ ಅವಶ್ಯಕತೆ ಇದ್ದಾಗ ವ್ಯಾಪಾರಕ್ಕೆ ಬೇಕಾದಷ್ಟು ದುಡ್ಡು ಕೊಡುತ್ತಿದ್ದನಂತೆ. ಹೀಗೆ ವ್ಯಾಪಾರದಲ್ಲಿ ಮುಂದುವರೆದು ಒಂದು ಹಳೆಯ ಮನೆಯನ್ನು ಖರೀದಿಸಿದನಂತೆ. ಐದಾರು ವರ್ಷಗಳ ನಂತರ ಆ ಮನೆಯನ್ನು ಕೆಡವಿ ಹೊಸದಾಗಿ ಕಟ್ಟಲು ಹೋದಾಗ ಕೋಟ್ಯಂತರ ರೂಪಾಯಿ ಬೆಲೆ ಬಾಳುವ ಬಂಗಾರದ ಗಟ್ಟಿಗಳು ಸಿಕ್ಕಿದವಂತೆ. ಅಜೀಮ್ ಖಾನರ ಅಪ್ಪ ಅದಾಗಲೇ ಮೆಜಾರಿಟಿಗೆ ಬಂದಿದ್ದರಂತೆ. ಹೈದರಾಬಾದಿಗೆ ಶಿಫ್ಟ್ ಆಗಿ ಬೇರೆ ಬೇರೆ ವ್ಯಾಪಾರ, ಉದ್ದಿಮೆಗಳಲ್ಲಿ ತೊಡಗಿಸಿಕೊಂಡರಂತೆ. ಅಜೀಮ್ ಖಾನ್ ಮದುವೆಯಾಗಿರೋದು ಲಂಡನ್ನಿನ ವಜ್ರದ ವ್ಯಾಪಾರಿಯೊಬ್ಬನ ಮಗಳನ್ನು. ಆದ್ರೂ ಹೈದರಾಬಾದ್ ಮತ್ತು ವಿಶಾಖಪಟ್ಟಣದಲ್ಲೂ ಒಬ್ಬೊಬ್ಬರನ್ನು ಮೇಂಟೇನ್ ಮಾಡುತ್ತಿದ್ದಾನೆ. ಎಲ್ಲರೂ ಅಪ್ಸರೆಯರ ಥರ ಇದಾರೆ. ಎಂಥಾ ಹೀರೋ , ಹೀರೋಯಿನ್‌ಗಳು ಇವನನ್ನು ಭೇಟಿ ಮಾಡಲು ದಿನಗಟ್ಟಲೆ ಕಾಯುತ್ತಾರೆ. ತುಂಬಾ ಸಂಪ್ರದಾಯಸ್ಥ. ಆದರೆ ಊಟ ಮತ್ತು ಸೆಕ್ಸ್ ವಿಷಯಕ್ಕೆ ಬಂದಾಗ ಯಾವ ಸಂಪ್ರದಾಯವನ್ನೂ ಕೇರ್ ಮಾಡೋದಿಲ್ಲ. ಇಷ್ಟಕ್ಕೂ ದೇಹ ಮತ್ತು ಮನಸ್ಸುಗಳಿಗೆ ಸುಖ ಕೊಡದ ಯಾವ ಸಂಗತಿಯೂ ಜೀವಜಗತ್ತಿನಲ್ಲಿ ಭದ್ರವಾಗಿರದು'. ರಾಘವರೆಡ್ಡಿ ಮಾತು ನಿಲ್ಲಿಸಿ ರೆಸ್ಟ್ ರೂಮಿಗೆ ಹೋಗಿ ಬಂದಿದ್ದ. ನಾವು ಲಿಫ್ಟ್ ಇಳಿದು ಕೆಳಗೆ ಬಂದಾಗ ಬೆಂಜ್ ಎಸ್ ಕ್ಲಾಸ್ ಕಾರು ನಮಗಾಗಿ ನಿಂತಿತ್ತು. ಅಜೀಮ್ ಖಾನ್ ಒಳ್ಳೆಯ ಹೋಸ್ಟ್ ಎಂಬುದು ಇದರಿಂದಾಗಿ ತಿಳಿದುಹೋಗಿತ್ತು.

### ಭಾಗ–17

ಅರ್ಧ ಗಂಟೆಯಲ್ಲಿ ನಾವು ಐಷಾರಾಮಿ ಬಂಗಲೆಯನ್ನು ತಲುಪಿದ್ದೆವು. ಅಜೀಮ್ ಖಾನ್ ನಮಗಾಗಿ ಪ್ರವೇಶ ದ್ವಾರದಲ್ಲಿ ಕಾಯುತ್ತಿದ್ದ. ಮನೆಯನ್ನು ಪ್ರವೇಶಿಸುತ್ತಿದ್ದಂತೆ ಅಪೂರ್ವ ಪರಿಮಳವೊಂದರ ಲೋಕವನ್ನು ಪ್ರವೇಶಿಸಿದ ಅನುಭವವಾಗಿತ್ತು. ರಾಘವರೆಡ್ಡಿ ಇಬ್ಬರನ್ನೂ ಪರಸ್ಪರ ಪರಿಚಯ ಮಾಡಿಕೊಟ್ಟಿದ್ದ. 'ರಾಘವರೆಡ್ಡಿಯವರು ನಿಮ್ಮ ಬಗ್ಗೆ ಬಹಳ ಹೇಳಿದ್ದಾರೆ' ನಜೀಮ್ ಖಾನನ ಕೈ ಕುಲುಕುತ್ತಾ ಹೇಳಿದ್ದೆ. 'ಅದು ಅವರ ದೊಡ್ಡ ಗುಣ ಸರ್, ಅವರ ತಾತ ಕಾಕಿಗಡ್ಡ ಹನುಮಂತ ರೆಡ್ಡಿಯವರು ಅವೊತ್ತು ನಮ್ಮ ತಾತನಿಗೆ ಸಹಾಯ ಮಾಡದೆ ಹೋಗಿದ್ದಿದ್ದರೆ ನಾವಿವೊತ್ತು ಈ ಸ್ಥಾನದಲ್ಲಿ ಇರುತ್ತಿರಲಿಲ್ಲ' ಎಂದು ಅಜೀಮ್ ಖಾನ್ ನಮ್ಮನ್ನು ಆತನ ರೂಮಿಗೆ ಕರೆದುಕೊಂಡು ಹೋಗಿದ್ದ. ಅದೊಂದು ದೊಡ್ಡ ಹಾಲ್‌ನಂತೆ ಇತ್ತು. ಎರಡು ದೊಡ್ಡ ಮಂಚಗಳ ಸಮೇತ ಇಟಾಲಿಯನ್ ಕೆತ್ತನೆಯಿದ್ದ ಐಷಾರಾಮಿ ಎರಡು ಸೋಫಾ ಸೆಟ್, ಒಂದು ವೃತ್ತಾಕಾರದ ಡೈನಿಂಗ್ ಟೇಬಲ್‌ಗಳಿದ್ದವಲ್ಲದೆ ನಾಲ್ಕು ಗೋಡೆಗಳಿಗೂ ಕನ್ನಡಿಗಳನ್ನು ಮೌಂಟ್ ಮಾಡಲಾಗಿತ್ತು. ನಾಲ್ಕು ಗೋಡೆಗಳ ಕನ್ನಡಿಗಳ ಮೇಲ್ಭಾಗದಲ್ಲಿ ಮೆಕ್ಕಾ ಮದೀನಾ, ಶಿರಡಿ ಸಾಯಿಬಾಬಾ, ಶಿಲುಬೆಗೇರಿಸಿದ ಏಸು ಮತ್ತು ಅನ್ನಾವರಂನ ಸತ್ಯನಾರಾಯಣ ಸ್ವಾಮಿ ತೈಲಚಿತ್ರಗಳನ್ನು ಅಂಟಿಸಲಾಗಿತ್ತು. ನಾಲ್ಕು ತೈಲಚಿತ್ರಗಳೂ ಗೋಡೆಯಿಂದ ಎದ್ದು ಬರುತ್ತಿರುವಂತೆ ಕಾಣುತ್ತಿದ್ದವು.

'ನಿಮ್ಮಂಥವರುಖಂಡಿತವಾಗಿತುಂಬಅಪರೂಪ. ಇಂಥ ಸರ್ವಧರ್ಮ ಸಮನ್ವಯತೆಯನ್ನು ಬೇರೆಲ್ಲೂ ಕಂಡ ನೆನಪಿಲ್ಲ ನನಗೆ' ಖುಷಿಯಿಂದಲೇ ಹೇಳಿದ್ದೆ ನಾನು. 'ನಾವು ಚರಿತ್ರೆಯಲ್ಲಿ ಕಂಡಂತೆ ಮತ್ತು ವರ್ತಮಾನದಲ್ಲೂ ಜಗತ್ತಿನ ಹಸಿದ ಜನ ದೇವರು ಮತ್ತು ಧರ್ಮಕ್ಕೆ ಕಿತ್ತಾಡಿಲ್ಲ ಮತ್ತು ಕಿತ್ತಾಡುತ್ತಿಲ್ಲ. ಉಳ್ಳವರು ಮತ್ತು ತಿಳಿದವರೇ ಧರ್ಮ ಮತ್ತು ದೇವರುಗಳನ್ನು ಇನ್ನಿಲ್ಲದಂತೆ ದುರುಪಯೋಗಪಡಿಸಿಕೊಳ್ತಿರೋದು. ಕ್ರೌರ್ಯ, ಹಿಂಸೆ ಮತ್ತು ಅಮಾನವೀಯತೆಗಳನ್ನು ಪ್ರೋತ್ಸಾಹಿಸುವ ಯಾವ ಧರ್ಮವೂ ನಿಜವಾದ ಧರ್ಮವಾಗದು' ಎಂದ ಅಜೀಮ್ ಖಾನನ ಮಾತುಗಳಲ್ಲಿ ಕಟು ಸತ್ಯ ಅಡಗಿತ್ತು. 'ಅಜೀಮ್ ಖಾನ್ ಕುರಾನ್ , ಬೈಬಲ್, ರಾಮಾಯಣ, ಮಹಾಭಾರತ ಮತ್ತು ಜಾಗತಿಕ ಇತಿಹಾಸ ಎಲ್ಲವನ್ನೂ ಚೆನ್ನಾಗಿ ಓದಿಕೊಂಡಿದ್ದಾರೆ' ಎಂದು ರಾಘವರೆಡ್ಡಿ ಅಜೀಮ್ ಖಾನನ್ನು ಶ್ಲಾಘಿಸಿದ್ದ.

(ಸಶೇಷ)